ಮಂಡ್ಯ ನಗರದ ಕಾವೇರಿ ವನದಲ್ಲಿ ಹಾಗೂ ಗಾಂಧಿ ಉದ್ಯಾನವನದಲ್ಲಿ ಸಂಗೀತ ಸಂಜೆ ಕಾರ್ಯಕ್ರಮ

1442(1994) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮಂಡ್ಯ ನಗರದಲ್ಲಿನ ಕಾವೇರಿವನದಲ್ಲಿ ಹಾಗೂ ಗಾಂಧಿ ಉದ್ಯಾನವನದಲ್ಲಿ ಪ್ರತಿ ಭಾನುವಾರ ಹಾಗೂ ಇತರೆ ರಜಾದಿನಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ವತಿಯಿಂದ ಸಾರ್ವಜನಿಕರಿಗಾಗಿ ಸಂಗೀತಸಂಜೆ ಕಾರ್ಯಕ್ರಮವನ್ನು ಏರ್ಪಡಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಆ. ಹಾಗಿದ್ದಲ್ಲಿ ಇದರ ಬಗೆಗಿನ ವಿವರಗಳೇನು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು)

ಅ. ಮಂಡ್ಯ ನಗರದ ಕಾವೇರಿವನದಲ್ಲಿ ಪ್ರತಿ ತಿಂಗಳ ಮೊದಲ ಶನಿವಾರ ಕಾವ್ಯಕಾವೇರಿ ಕಾರ್ಯಕ್ರಮವನ್ನು ನಿರಂತರವಾತಗಿ ನಡೆಸಿಕೊಂಡು ಬರಲಾಗುತ್ತಿದೆ.

ಗಾಂಧಿ ಉದ್ಯಾನವನದಲ್ಲಿ ದಿ: 9.3.03 ಹಾಗೂ 16.3.03 ರಂದು ಸಂಜೆ ಹೊತ್ತು ಸಂಧ್ಯಾರಾಗ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಆ. ಸಂಧ್ಯಾರಾಗ ಕಾರ್ಯಕ್ರಮಕ್ಕೆ ಉತ್ತಮ ಪ್ರತಿಕ್ರಿಯೆ ಬಂದಲ್ಲಿ 2003ರ ಏಪ್ರಲ್ ನಿಂದ ತಿಂಗಳಿಗೆ 2 ಭಾನುವಾರ ಸಂಧ್ಯಾರಾಗ ಕಾರ್ಯಕ್ರಮ ಏರ್ಪಡಿಸುವ ಕುರಿತು ಪರಿಶೀಲಿಸಲಾಗುವುದು.

ಕಾಗವಾಡ ಕ್ಷೇತ್ರದ ವ್ಯಾಪ್ತಿಯಲ್ಲಿ ಮಂಡಲ ಗ್ರಂಥಾಲಯಗಳ ಪ್ರಾರಂಭ

1445 (1518) ಶ್ರೀ ಭರಮಗೌಡ ಅ. ಕಾಗೆ (ಕಾಗವಾಡ): ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು ಮತ್ತು ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಅಥಣಿ ತಾಲ್ಲೂಕಿನ ಕಾಗವಾಡ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಿಂದ ಎಷ್ಟು ಮಂಡಲ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ (ವಿವರಗಳನ್ನು ನೀಡುವುದು)

ಶ್ರೀ ಬಾಬುರಾವ್ ಚಿವ್ಹಾಣ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು ಮತ್ತು ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ. ಕಳೆದ 3 ವರ್ಷಗಳಿಂದ ಒಟ್ಟು 8 ಮಂಡಲ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ. ವಿವರ ಈ ಕೆಳಗಿನಂತಿರುತ್ತವೆ;

1999-2000ನೇ ಸಾಲು:07

1. ನದಿಇಂಗಳಗಾಂವೆ, (2)ಸತ್ತಿ, (3) ಶೇಡಬಾಳ, 4) ಕಾಗವಾಡ, 5) ಶಂಕ್ರಟ್ಟಿ, (6) ಹುಲಗಬಾಳ, (7) ಉಗಾರ. ಬಿ.ಕೆ.

2000-01ನೇ ಸಾಲು :01

1. ಸೌದಿ ಆರ್. ಸಿ.

2001-02ನೇ ಸಾಲು: ಇಲ್ಲ